(31)

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:27/07/2016

**ಪ್ರಕರಣ ಸಂಖ್ಯೆ: ಆರ್‌ಎ. 69/2013-14**

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀ ಬಿ.ಕೃಷ್ಣಪ್ಪ<br>ಬಿನ್ ಲೇಟ್ ತಮ್ಮಣ್ಣ (ಅ) ಬೈಚಪ್ಪ<br>ವಕ್ಕಲೇರಿ ಗ್ರಾಮ ಮತ್ತು ಹೋಬಳಿ<br>ಕೋಲಾರ ತಾಲ್ಲೂಕು<br>( ಶ್ರೀ ಕೆ.ಆರ್.ಶ್ರೀನಿವಾಸಯ್ಯ<br>-ವಕೀಲರು ರವರಿಂದ) | | 8. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>9. ತಹಶೀಲ್ದಾರ್<br>ಕೋಲಾರ ತಾಲ್ಲೂಕು<br>10. ರಾಜಸ್ವ ನೀರಿಕ್ಷಕರು<br>ವಕ್ಕಲೇರಿ ಹೋಬಳಿ<br>ಕೋಲಾರ ತಾಲ್ಲೂಕು<br>11. ಗ್ರಾಮಲೆಕ್ಕಿಗರು<br>ವಕ್ಕಲೇರಿ ಕಂದಾಯ ವೃತ್ತ<br>ಕೋಲಾರ ತಾಲ್ಲೂಕು |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್.ಎ.684/2011-12 ದಿನಾಂಕ:29/11/2013. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 136 ಓದಲಾದ ಕಲಂ 50 ಮತ್ತು 25 ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ವಕ್ಕಲೇರಿ ಗ್ರಾಮದ ಸ.ನಂ. 103/2ಬಿ ರ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರ್, ಕೋಲಾರ ತಾಲ್ಲೂಕು ರವರ ಹುಕ್ಕುಂ ಕ್ರಮಾಂಕ: ಆರ್.ಆರ್.ಟಿ/ಸಿ.ಆರ್/ 258/2010-11 ದಿನಾಂಕ:11/01/2011 ರ ಕ್ರಮಬದ್ಧತೆಯನ್ನು ಪ್ರಶ್ನಿಸಿ ಶ್ರೀ ಬಿ.ಕೃಷ್ಣಪ್ಪ ಬಿನ್ ಲೇಟ್ ತಮ್ಮಣ್ಣ (ಅ) ಬೈಚಪ್ಪ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿದ್ದರ ಮೇರೆಗೆ ವಿಚಾರಣೆ ನಂತರ ನಂ.ಆರ್.ಎ.684/2011-12 ರಂತೆ ದಿನಾಂಕ:29/11/2013 ರಂದು ಹೊರಡಿಸಿದ ಆದೇಶದಲ್ಲಿ ಇವರ ಮೇಲ್ಮನವಿ ಅರ್ಜಿಯನ್ನು ವಜಾಕರಿಸಿ ಆದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣವನ್ನು ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಿ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯ್ತು.

ದಿನಾಂಕ:09/07/2014 ರಂದು ಮೇಲ್ಮನವಿದಾರರ ಪರ ವಕೀಲರು ಹಾಜರು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು. ಹಿಂದಿನ ಪೀಠಾಧಿಕಾರಿಗಳು ಆದೇಶ ಹೊರಡಿಸದ ಕಾರಣ ಪುನಃ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯ್ತು. ಸಾಕಷ್ಟು ಕಾಲವಕಾಶ ನೀಡಿ ವಿಚಾರಣೆ ಮಾಡಿದೆ. ದಿನಾಂಕ:22/06/2016 ರಂದು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

ಮೇಲ್ಮನವಿದಾರರು ತಮ್ಮ ಮೇಲ್ಮನವಿಯಲ್ಲಿ ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ವಕ್ಕಲೇರಿ ಗ್ರಾಮದ ಸ.ನಂ. 103/2ಬಿ ರಲ್ಲಿ ಒಟ್ಟು ವಿಸ್ತೀರ್ಣ 1-28 ಎಕರೆ ಜಮೀನು ಹಿಡುವಳಿಯಾಗಿದ್ದು, ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಮತ್ತು ತಾನೇ ಅನುಭವ ಹಾಗೂ ಹಕ್ಕನ್ನು ಹೊಂದಿರುವುದಾಗಿ ವಾದಿಸಿರುತ್ತಾರೆ. ಹೀಗಿರುವಾಗ ಎದುರುದಾರರು ಸದರಿ ಜಮೀನಿನ ಪೂರಾ ವಿಸ್ತೀರ್ಣಕ್ಕೆ ತನ್ನ ಹೆಸರಿಗೆ ಖಾತೆ ಮಾಡದೆ 1-17½ ಗುಂಟೆ ಜಮೀನನ್ನು ಮಾತ್ರ ಖಾತೆ ಮಾಡಿದ್ದು ಉಳಿಕೆ 0-09½ ಎಕರೆ ಜಮೀನು ಸರ್ಕಾರದ ಹೆಸರಿನಲ್ಲಿ ನಮೂದಿಸಿರುವುದು ಕಾನೂನುಬಾಹಿರವಾಗಿರುತ್ತದೆ. ಆದ್ದರಿಂದ, ಪ್ರಶ್ನಿತ ಆದೇಶಗಳನ್ನು ರದ್ದುಪಡಿಸಿ ಪ್ರಶ್ನಿತ ಜಮೀನನ್ನು ತನ್ನ ಹೆಸರಿಗೆ ಖಾತೆ ಮಾಡಲು ಆದೇಶಿಸುವಂತೆ ಕೋರಿರುತ್ತಾರೆ.

...2

ಮೇಲ್ಮನವಿದಾರರ ವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯ್ತು. ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ವಕ್ಕಲೇರಿ ಹೋಬಳಿ, ವಕ್ಕಲೇರಿ ಗ್ರಾಮದ ಸ.ನಂ. 103/2ಬಿ ರಲ್ಲಿ ಒಟ್ಟು ವಿಸ್ತೀರ್ಣ 1-28 ಎಕರೆ 0-01 ಗುಂಟೆ ಖರಾಬು ಜಾತ 1-27 ಎಕರೆ ಹಿಡುವಳಿ ಜಮೀನಾಗಿರುತ್ತದೆ. ಮಾನ್ಯ 3ನೇ ತ್ವರಿತ ನ್ಯಾಯಾಲಯ, ಕೋಲಾರ ರವರ ಸಂಖ್ಯೆ:ಆರ್.ಎ.12/1999 ದಿನಾಂಕ:22/03/2005 ರಂದು ನೀಡಿರುವ ತೀರ್ಪಿನಲ್ಲಿ ಮೇಲ್ಮನವಿದಾರರಾದ ಶ್ರೀ ಬಿ.ಕೃಷ್ಣಪ್ಪ ಬಿನ್ ಲೇಟ್ ತಮ್ಮಣ್ಣ (ಅ) ಬೈಚಪ್ಪ ರವರು ವಿವಾದಿತ ಸ.ನಂ. 103/2ಬಿ ರಲ್ಲಿ 1-17½ ಎಕರೆ ಜಮೀನಿಗೆ ಮಾತ್ರ ಹಕ್ಕುದಾರರೆಂದು ಆದೇಶಿಸಿರುತ್ತಾರೆ. ಅದರಂತೆ ತಹಶೀಲ್ದಾರ್, ಕೋಲಾರ ರವರು ಖಾತೆ ಮಾಡಿ ಉಳಿದ 0-09½ ಗುಂಟೆ ಜಮೀನನ್ನು ಸರ್ಕಾರದ ಹೆಸರಿಗೆ ನಮೂದಿಸಲು ಆದೇಶಿಸಿರುವುದು ಕಡತದಲ್ಲಿರುವ ದಾಖಲೆಗಳಿಂದ ಕಂಡುಬರುತ್ತದೆ. ಮೇಲ್ಮನವಿದಾರರು, ಈ ನ್ಯಾಯಾಲಯದಲ್ಲಿ 1-17½ ಎಕರೆ ಜಮೀನು ಹೊರತುಪಡಿಸಿ ಉಳಿದ 0-09½ ಗುಂಟೆ ಜಮೀನು ತಮಗೆ ಪ್ರಾಪ್ತಿಯಾದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮೇಲ್ಮನವಿದಾರರ ವಾದದಲ್ಲಿ ಯಾವುದೇ ಸಮರ್ಥನೆ **(No substance)** ಇರುವುದಿಲ್ಲ. ಆದ್ದರಿಂದ ಪ್ರಶ್ನಿತ ಆದೇಶದಲ್ಲಿ ಮಧ್ಯಪ್ರವೇಶಿಸಲು ಯಾವುದೇ ಸಕಾರಣಗಳಿರುವುದಿಲ್ಲ.

## ಆದೇಶ

ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿದೆ. ಕೆಳನ್ಯಾಯಾಲಯದ ಪ್ರಶ್ನಿತ ಆದೇಶವನ್ನು ಎತ್ತಿಹಿಡಿದಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:27/07/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.